# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 5 (115) |
| ಸದಸ್ಯರ ಹೆಸರು | : ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 19.12.2022 |
| ಉತ್ತರಿಸುವ ಸಚಿವರು | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ವರ್ಷದಲ್ಲಿ ಸರ್ಕಾರಿ ಶಾಲೆ ಬಿಟ್ಟು ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದ್ದಲ್ಲಿ, ಕಾನ್ವೆಂಟ್ ಸೇರುವುದನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು; | • ಹೌದು.<br>• 2021-22 & 2022-23ರಲ್ಲಿ ಕಲಿಕಾಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಶಿಕ್ಷಕರಿಗೆ ಕೋವಿಡ್ ಸಮಯದಲ್ಲಿ ತರಬೇತಿ ನೀಡಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಒತ್ತು ನೀಡಲಾಗಿದೆ.<br>• 2019-20 ಹಾಗೂ 2020-21ನೇ ಸಾಲುಗಳಲ್ಲಿ 2400 ಶಾಲೆಗಳಲ್ಲಿ ಹಾಲಿ ಇರುವ ಕನ್ನಡ ಮಾಧ್ಯಮದ ಜೊತೆಗೆ ದ್ವಿಭಾಷಾ ಮಾದರಿಯಲ್ಲಿ (ಕನ್ನಡ-ಆಂಗ್ಲ ಮತ್ತು ಉರ್ದು-ಆಂಗ್ಲ) ತರಗತಿಗಳನ್ನು ಪ್ರಾರಂಭಿಸಲಾಗಿದೆ. ಸದರಿ ಶಾಲೆಗಳಲ್ಲಿ ತರಗತಿಗಳನ್ನು ನಿರ್ವಹಿಸಲು ಎಲ್ಲಾ ಶಿಕ್ಷಕರಿಗೆ EMTIP (English Medium Teachers Induction Programme) ತರಬೇತಿಯನ್ನು ಹಂತ ಹಂತವಾಗಿ (ತರಗತಿ 1,2,3) ನೀಡಲಾಗಿದೆ. ಈ ತರಗತಿಗಳಲ್ಲಿ ಸಮರ್ಪಕವಾಗಿ ಕಲಿಕೆಯನ್ನು ನಿರ್ವಹಿಸಲು ಶಿಕ್ಷಕರಿಗೆ ಕೈಪಿಡಿ, ಪಾಠೋಪಕರಣಗಳು ಹಾಗೂ ಮಾರ್ಗದರ್ಶನ ಸತತವಾಗಿ ನೀಡಲಾಗುತ್ತಿದೆ.<br>• KPS ಶಾಲೆಗಳಲ್ಲಿ ಈಗಾಗಲೇ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಿಸಲಾಗಿರುತ್ತದೆ.<br>• 2021-22ನೇ ಸಾಲಿನಿಂದ 9 ಮತ್ತು 10ನೇ ತರಗತಿಯನ್ನು ಬೋಧಿಸುತ್ತಿರುವ 59105 ಪ್ರೌಢ ಶಾಲಾ ಶಿಕ್ಷಕರಿಗೆ DSERT ವತಿಯಿಂದ ಆನ್‌ಲೈನ್ ಮೂಲಕ ನಿಷ್ಠಾ 2.0 ತರಬೇತಿಯನ್ನು ನೀಡಲಾಗುತ್ತಿದೆ.<br>• 2021-22ನೇ ಸಾಲಿನಿಂದ 1 ರಿಂದ 5ನೇ ತರಗತಿಯನ್ನು ಬೋಧಿಸುತ್ತಿರುವ 65430 ಪ್ರಾಥಮಿಕ ಶಾಲಾ ಶಿಕ್ಷಕರಿಗೆ DSERT ವತಿಯಿಂದ ಆನ್‌ಲೈನ್ ಮೂಲಕ ನಿಷ್ಠಾ 3.0(ಮೂಲ ಭಾಷಾ ಹಾಗೂ ಸಂಖ್ಯಾ ಜ್ಞಾನ - FLN) ತರಬೇತಿಯನ್ನು ನೀಡಲಾಗುತ್ತಿದೆ.<br>• ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ ಪರ್ಯಾಯ ಶಿಕ್ಷಕರಿಗೆ ಶೈಕ್ಷಣಿಕ ಯೋಜನೆಯನ್ನು ಇಲಾಖೆಯಿಂದ ನೀಡಲಾಗಿದೆ.<br>• ಮಕ್ಕಳಿಗೆ ಓದುವ ಹವ್ಯಾಸವನ್ನು ಉತ್ತಮಪಡಿಸಲು ರಾಜ್ಯದ 9008 ಪ್ರಾಥಮಿಕ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br>• ವಿದ್ಯಾರ್ಥಿಗಳಿಗೆ ಆನ್‌ಲೈನ್ ಬೋಧನೆಯನ್ನು |

| | | |
|---|---|---|
| | | ಕೈಗೊಳ್ಳಲಾಗಿದೆ.<br>• 2018-19ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಆಯ್ದ ಪ್ರೌಢ ಶಾಲೆಗಳಿಗೆ 2681 ಗಣಿತ ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ.<br>• KPS ಶಾಲೆಗಳಲ್ಲಿನ ಮೂಲಭೂತ ಸೌಲಭ್ಯವೃದ್ಧಿಗಾಗಿ 2020- 21ನೇ ಸಾಲಿನಲ್ಲಿ 50 ಶಾಲೆಗಳು ಮತ್ತು 2021-22ನೇ ಸಾಲಿಗೆ 50 ಶಾಲೆಗಳಿಗೆ ತಲಾ 2ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ.<br>• ಟ್ಯಾಲ್ಪ್ ಯೋಜನೆಯಡಿ 4687 ಸರ್ಕಾರಿ ಪ್ರೌಢ ಶಾಲೆಗಳ ಪೈಕಿ 3218 ಸರ್ಕಾರಿ ಪ್ರೌಢ ಶಾಲೆಗಳಿಗೆ computers ಗಳು, ಎಲ್ಲಾ 4687ಸರ್ಕಾರಿ ಪ್ರೌಢ ಶಾಲೆಗಳಿಗೆ Laptops & Projectors ಗಳನ್ನು ಸರಬರಾಜು ಮಾಡಲಾಗಿದೆ.<br>• DSERT ವತಿಯಿಂದ ಟ್ಯಾಲ್ಪ್ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಿಗೆ ಟ್ಯಾಲ್ಪ್ ತರಬೇತಿಯನ್ನು ನೀಡಲಾಗುತ್ತಿದೆ.<br>• ಪ್ರೌಢಶಾಲಾ ಹಂತದಲ್ಲಿಯೂ ಶಿಕ್ಷಕರ ಅಗತ್ಯತೆ ಆಧರಿಸಿ ತರಬೇತಿ ನೀಡುವುದರೊಂದಿಗೆ ತಂತ್ರಜ್ಞಾನ ಆಧಾರಿತ ಕೌಶಲಕ್ಕೆ ಒತ್ತು ನೀಡಲಾಗುತ್ತಿದೆ. |
| ಆ) | ಸರ್ಕಾರಿ ಶಾಲೆಗಳ ಖಾಸಗಿ ಶಾಲೆಗಳ ರೀತಿ ಅಭಿವೃದ್ಧಿ ಮಾಡಲು ಸರ್ಕಾರ ಯೋಜನೆಗಳನ್ನು ರೂಪಿಸಿದೆಯೇ; (ಮಾಹಿತಿ ಒದಗಿಸುವುದು) | • ಗುಣಾತ್ಮಕ ಶಿಕ್ಷಣಕ್ಕಾಗಿ ನಿಯಮಿತವಾಗಿ ಶಿಕ್ಷಕರಿಗೆ ತರಬೇತಿ ಆಯೋಜಿಸಲಾಗುತ್ತದೆ.<br>• ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ವರ್ಕ್ ಬುಕ್ ಮಧ್ಯಾಹ್ನ ಉಪಹಾರ ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.<br>• ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.<br>• 6 ರಿಂದ 8ನೇ ತರಗತಿಯವರೆಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಎನ್.ಸಿ.ಇ.ಆರ್.ಟಿ ಪಠ್ಯವಸ್ತುವಿನ ಪಠ್ಯಮಸ್ತಕಗಳನ್ನು ಜಾರಿಗೊಳಿಸಲಾಗಿದೆ.<br>• ಸರ್ಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.<br>• 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳು(ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ.<br>• ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಮತ್ತು ನ್ಯೂನ್ಯತೆಗನುಗುಣವಾಗಿ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.<br>• ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ, ಯೋಗ, ಕರಾಟೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>• ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಸಂಬಂಧಿಸಿದ ಶೋಷಕರು ಮತ್ತು |

| | | |
|---|---|---|
| | | ವಿದ್ಯಾರ್ಥಿಗಳನ್ನು ಮನವೊಲಿಸಿ, ಪುನ: ಶಾಲೆಗೆ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್‌ಡಿಎಮ್ಸಿ, ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ<br>• ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡುಹಿಡಿಯಲಾಗುತ್ತಿದೆ.<br>• ಶಾಲಾ ದತ್ತು ಯೋಜನೆ (ಸಿ.ಎಸ್.ಆರ್) ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸಲಾಗುತ್ತಿದೆ.<br>• 6 ಮತ್ತು 8ನೇ ತರಗತಿಗೆ 1500 ಜಿ.ಪಿ.ಟಿ ಅತಿಥಿ ಶಿಕ್ಷಕರ ನೇಮಾಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ.<br>• ರಾಜ್ಯದ ಸರ್ಕಾರಿ & ಅನುದಾನಿತ ಶಾಲೆಗಳಿಂದ ಸಾಧನೆ ಮಾಡಿದ ಶಿಕ್ಷಕರುಗಳಿಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಗುತ್ತಿದೆ. ಇದರಿಂದಾಗಿ ಶಿಕ್ಷಕರು ತಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪರಿಣಾಮಕಾರಿ ಪಾಠ ಬೋಧನೆಗೆ ಶ್ರಮಿಸುವರು.<br>• ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ಗುರ್ತಿಸಿ ಶಾಲಾ ನವೀಕರಣಕ್ಕಾಗಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ<br>• ಪ್ರತಿ ವರ್ಷ ರಾಜ್ಯದಲ್ಲಿ 8 ಉತ್ತಮ ಶಾಲೆಯನ್ನು ಗುರ್ತಿಸಿ ಸ್ವಾಭಿಮಾನಿ ಶಾಲೆಗಳಾಗಿ ಆಯ್ಕೆ ಮಾಡಿ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.<br>• ರಾಜ್ಯದ ಎಲ್ಲಾ ಶಾಲೆಗಳಿಗೆ ಸಿ.ಆರ್.ಪಿ ಬಿ.ಆರ್.ಪಿ. ಬಿ.ಆರ್.ಸಿ ಡಯಟ್ ಉಪನ್ಯಾಸಕರು ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಗಳು ಪ್ರತಿ ಮಾಹ ಸದರಿ ಶಾಲೆಗಳ ಭೇಟಿ ನೀಡುವುದರೊಂದಿಗೆ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಅನುಪಾಲನೆ ಮಾಡಲು ಸೂಚಿಸಲಾಗಿರುತ್ತದೆ.<br>• ಪಿ.ಆರ್.ಡಿ.ಎಫ್ ಯೋಜನೆಯಡಿ ಗ್ರಾಮಸಭೆ ನಡೆಸುವ ಮೂಲಕ ಮಕ್ಕಳ ದಾಖಲಾತಿ ಆಂದೋಲನವನ್ನು ಹಮ್ಮಿಕೊಂಡು ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮವಹಿಸುವುದು.<br>• ಎನ್.ಟಿ.ಎಸ್.ಇ (ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ & ಎಂ.ಹೆಚ್. ಆರ್.ಡಿ ಮೂಲಕ ವಿದ್ಯಾರ್ಥಿ ವೇತನ ನೀಡಿ. ಪ್ರೋತ್ಸಾಹಿಸಲಾಗುತ್ತಿದೆ.<br>• ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಪ್ರತಿ ಬ್ಲಾಕ್ ನಲ್ಲಿ ನೋಡಲ್ ಅಧಿಕಾರಿಗಳ ನೇಮಿಸಿ ಪೋಷಕರ & ಮಕ್ಕಳ ಮನವೊಲಿಸಿ ಶಾಲೆಗೆ ಕರೆತರಲು ಕ್ರಮವಹಿಸಲಾಗುತ್ತಿದೆ. |
| ಇ) | ದಾವಣಗೆರೆ ಜಿಲ್ಲೆಯಲ್ಲಿ 2022-23ನೇ ಸಾಲಿನಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯಲು ಕೋರಿ ಸ್ವೀಕೃತಗೊಂಡಿರುವ ಮನವಿ/ಅರ್ಜಿಗಳೆಷ್ಟು; | **2022-23 ನೇ ಸಾಲಿನಲ್ಲಿ**<br>• **ಸರ್ಕಾರಿ ಪ್ರಾಥಮಿಕ ಶಾಲೆ:-** ಹೊಸದಾಗಿ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು |

| | | |
|---|---|---|
| | (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು) | ಸ್ವೀಕೃತಗೊಂಡಿರುವುದಿಲ್ಲ.<br><br>**ಸರ್ಕಾರಿ ಪ್ರೌಢಶಾಲೆ:-**<br><br>1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಮನಗರ, ತೋಳಹುಣಸೆ ತಾ. ದಾವಣಗೆರೆ.<br>2. ಸ.ಉ.ಪ್ರೌ.ಶಾಲೆ ಈಚಘಟ್ಟ, ದಾವಣಗೆರೆ ಜಿಲ್ಲೆ.<br>3. ಸ.ಪ್ರೌ.ಶಾಲೆ ಎಸ್.ಎಂ ಬಡಾವಣೆ, ದಾವಣಗೆರೆ ಜಿಲ್ಲೆ.<br><br>**<u>ಖಾಸಗಿ ಪ್ರಾಥಮಿಕ ವಿಭಾಗಕ್ಕೆ-03:-</u>** ಪ್ರಸ್ತಾವನೆಯು ಸ್ವೀಕೃತವಾಗಿದ್ದು 03 ಪ್ರಸ್ತಾವನೆಗಳನ್ನು ಅಂಗೀಕರಿಸಲಾಗಿದೆ. (ಚನ್ನಗಿರಿ ತಾಲ್ಲೂಕು-01, ದಾವಣಗೆರೆ ಉತ್ತರ-01,ಹೊನ್ನಾಳಿ ತಾಲ್ಲೂಕು-01)<br><br>**<u>ಖಾಸಗಿ ಪ್ರೌಢಶಾಲಾ ವಿಭಾಗಕ್ಕೆ-05</u>**:- ಪ್ರಸಾವನೆಯು ಸ್ವೀಕೃತವಾಗಿದ್ದು 04 ಪ್ರಸ್ತಾವನೆಯನ್ನು ಅಂಗೀಕರಿಸಲಾಗಿದೆ. (ಚನ್ನಗಿರಿ ತಾಲ್ಲೂಕು-01, ದಾವಣಗೆರೆ ದಕ್ಷಿಣ-01, ದಾವಣಗೆರೆ ಉತ್ತರ-01, ಹರಿಹರ ತಾಲ್ಲೂಕು-01) ಹಾಗೂ 01 ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. |
| ಈ) | ಅನುಮತಿ ಪಡೆದು ಕಾರ್ಯರಂಭ ಮಾಡಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು? (ಸರ್ಕಾರಿ/ಖಾಸಗಿ ಶಾಲೆಗಳ ಸಂಪೂರ್ಣ ಮಾಹಿತಿ ಒದಗಿಸುವುದು) | **<u>ಸರ್ಕಾರಿ ಶಾಲೆಗಳ ಮಾಹಿತಿ-</u>** ಸರ್ಕಾರಿ ಪ್ರಾಥಮಿಕ ಶಾಲೆ - ಹೊಸದಾಗಿ ಅನುಮತಿ ಪಡೆದು ಕಾರ್ಯಾರಂಭ ಮಾಡಿರುವುದಿಲ್ಲ.<br><br>**ಸರ್ಕಾರಿ ಪ್ರೌಢಶಾಲೆ -**<br><br>1. ಸ.ಉ.ಪ್ರೌ.ಶಾಲೆ ಈಚಘಟ್ಟ, ದಾವಣಗೆರೆ ಜಿಲ್ಲೆ.<br>2. ಸ.ಪ್ರೌ.ಶಾಲೆ ಎಸ್.ಎಂ ಬಡಾವಣೆ, ದಾವಣಗೆರೆ ಜಿಲ್ಲೆ.<br><br>**<u>ಖಾಸಗಿ ಶಾಲೆಗಳ ಮಾಹಿತಿ</u>**<br><br>**ಪ್ರಾಥಮಿಕ ಶಾಲೆ-03**<br><br>1. ಮಧುಕೇಶ್ವರ ಹಿ.ಪ್ರಾ.ಶಾಲೆ ವದಿಗೆರೆ ಚನ್ನಗಿರಿ ತಾ.<br>2. ದುರ್ಗಾಂಬಿಕ ಪ್ರಾಶಾಲೆ ದಾವಣಗೆರೆ ಉತ್ತರವಲಯ<br>3. ಚನ್ನಮಲ್ಲಿಕಾರ್ಜುನ ಹಿ.ಪ್ರಾ.ಶಾಲೆ ಹಿರೇಕಲ್ಮಟ ಸುರಹೊನ್ನ, ಹೊನ್ನಾಳಿ ತಾ.<br><br>**ಪ್ರೌಢಶಾಲೆ-04**<br><br>1. ಪೀಸ್ ಇಂಟರ್ ನ್ಯಾಷನಲ್ ಪ್ರೌಢಶಾಲೆ ಹರಿಹರ<br>2. ಶಾಮನೂರ ಶಿವಶಂಕರಪ್ಪ ಪ್ರೌಢಶಾಲೆ ದಾವಣಗೆರೆ ದಕ್ಷಿಣ<br>3. ವಿಜಯ ಪ್ರೌಢಶಾಲೆ ಸಂತೆಬೆನ್ನೂರು ಚನ್ನಗಿರಿ ತಾ.<br>4. ಯುನಿಟೇಡ್ ಇಂಟರ್ ನ್ಯಾಷನಲ್ ಪ್ರೌಢಶಾಲೆ ದಾವಣಗೆರೆ ಉತ್ತರ. |

**ಸಂಖ್ಯೆ: ಇಪಿ 90 ಪಿಎಂಎ 2022**

**(ಬಿ.ಸಿ.ನಾಗೇಶ್)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಹಾಗೂ ಸಕಾಲ ಸಚಿವರು**